


**ಎಡದಿಂದ ಬಲಕ್ಕೆ:**

1. ಪ್ರಭಾವ ಬೀರುವ ಪ್ರಯತ್ನದಲ್ಲಿ ಭಾರೀ ಸೋಲಾಯಿತು (4)
3. ಬದರಿಯಿಂದ ತಂದದ್ದು ಅಗಲ ಬಾಯಿಯ ಪಾತ್ರೆ (3)
4. ರುಜು ಹಾಕಲು ಬಂದವನೇ ಅಗಸ (3)
6. ಜನಾಭಿಪ್ರಾಯದಂತೆ ಆತ ಎಲ್ಲರಿಗೂ ಇಷ್ಟನಾದವ (4)
7. ಕೆಣಕಲಿಕ್ಕೆ ಹೋಗಿ ಪೆನ್ನು ಪಡೆದನೇ? (4)
9. ಬಗಲಿಗೆ ಬ್ಯಾಗು ಏರಿಸಿ ನಡೆದದ್ದು ಬೇಗ ಬೇಗ (4)
12. ದಡ್ಡನಿಗೆ ಕೊಂಬು ಜೋಡಿಸಿ ಪಡೆದ ಹಣ ಜೋಡಿ (4)
14. ತಾಳು ತಾಳೆಂದರೆ ಮೆಟ್ಟಿ ಹಾಕುವುದೇ? (3)
15. ಚಂದಾದಾರರಿಗೆಲ್ಲ ಒಂದೊಂದು ರೇಶ್ಮೆ ಹೊದಿಕೆ (3)
16. ನಗಿಸುವ ಕಾರ್ಯಕ್ಕೆ ಬಂದ ವಿದೂಷಕ (4)

**ಮೇಲಿಂದ ಕೆಳಕ್ಕೆ:**

1. ಪ್ರಾಣಾಯಾಮ ತಜ್ಞನ ವಿವಾಹ ಹೇಗೆ? (4)
2. ಮೇಲೇರಿದವರ ಕೈಗೆ 'ಮದುಮಗನ ಹಾರ' (4)
3. ಧನಮದದ ಪ್ರದರ್ಶನವನ್ನು ಅಡಗಿಸಿದರೇ? (3)
5. ಹೆಣ್ಣು ಜಿಂಕೆ–ಹರಿಣಿ; ಹೆಣ್ಣು ಆನೆ? (3)
6. ಶಾಲೆಯಲ್ಲಿ ಆತನೇ ವಿಜಯ ಗಳಿಸಿದ್ದು (4)
8. ಸುರುಳಿ ಕೆಡಿಸು, ಕೋಪ ಬರಿಸು (4)
10. ಗೊತ್ತಿರುವುದನ್ನು ದೃಢೀಕರಿಸುವ ಚಹರೆ ಏನು? (3)
11. ಗೋಳು ತಪ್ಪಿಸಿದವನ ಜೊತೆಗೆ ಒಳ್ಳೇ ಸ್ನೇಹ (4)
12. ದುರ್ಜನರದು ಚೋರರಂತೆ ತಪ್ಪು ನಡವಳಿಕೆ (4)
13. ಕೊರತೆ ನೀಗಿಸಲು ಈ ಚಡಪಡಿಕೆ (3)

---

**ಪದಬಂಧ 19-4-2012 ರ ಉತ್ತರಗಳು**

**ಎಡದಿಂದ ಬಲಕ್ಕೆ:**

1. ಅನಿತ್ಯ; 3. ಪ್ರಲಾಪ; 4. ಜಿಜ್ಞಾಸು; 6. ತಲಾಂತರ; 7. ಚಲಪತಿ; 9. ಕಲ್ಪತರು; 11. ಸಹಸ್ರಾರು; 15. ಕುಶಾಲು; 16. ನಂಬುಗೆ; 17. ಮೆದುಗ.

**ಮೇಲಿಂದ ಕೆಳಕ್ಕೆ:**

1. ಅಪಕ್ವ; 2. ತ್ಯಜಿಸು; 3. ಪ್ರಭಾತ; 5. ಸುಶೀಲ; 6. ತವಕ; 8. ತಿಮಿರು; 10 ತದಕು; 12. ಹಲಗೆ; 13. ಒಲುಮೆ; 14. ಅನಂಗ.

# ಕಪ್ಪೆ -ಸೋಜಿಗ

## 'ಗಾಜು ಕಪ್ಪೆ' ಇದೆಯೇ?

ಹೌದು, ಇದೆ. ಚಿಗುರೆಲೆ ಹಸಿರಿನ ಬಣ್ಣದ, ಗಾಜಿನಂತೆಯೇ ಪಾರಕ ಶರೀರದ ಕಪ್ಪೆ ಇದೆ. ನೋಡಿದೊಡನೆ ಅಚ್ಚರಿಗೊಳಿಸುವ, 'ಜೀವಂತ ಗಾಜಿನಂತೆ' ಬೆರಗುಗೊಳಿಸುವ ಈ ಅತಿ ವಿಶಿಷ್ಟ, ವಿಚಿತ್ರ, ವಿಭಿನ್ನ ಗುಣದಿಂದಾಗಿ 'ಗ್ಲಾಸ್ ಫ್ರಾಗ್' ಎಂದೇ ಈ ಕಪ್ಪೆ ಪ್ರಸಿದ್ಧ.

ಹಾಗೆಂದು ಗಾಜು ಕಪ್ಪೆಯದು ಒಂದೇ ಒಂದು ಪ್ರಭೇದ ಏನಲ್ಲ. ಒಟ್ಟು 2600 ಪ್ರಭೇದಗಳಿರುವ ಕಪ್ಪೆ ವರ್ಗದಲ್ಲಿ ಗಾಜು ಕಪ್ಪೆಗಳದೇ ಒಂದು ವಿಶಿಷ್ಟ ಕುಟುಂಬ. 'ಸೆಂಟ್ರೋಲೇನಿಡೆ' ಎಂಬ ಈ ಕುಟುಂಬದಲ್ಲಿ ಹತ್ತಾರು ಪ್ರಭೇದಗಳಿವೆ. ಅವುಗಳಲ್ಲೊಂದಾದ 'ಕಾಖ್ರನೆಲ್ಲ ಆ್ಯಂಟಿಸ್ಥೆನೇಸೀ' ಚಿತ್ರದಲ್ಲಿದೆ ನೋಡಿ. ಎಂಥ ಕಪ್ಪೆ! ಎಂಥ ಹೆಸರು!

ಎಲ್ಲ ಗಾಜು ಕಪ್ಪೆಗಳದೂ ಪುಟ್ಟ ಗಾತ್ರ. ಒಂದಂಗುಲ ಉದ್ದದ ಶರೀರ. ಹಾಗಾಗಿ ಗಿಡ ಮರಗಳ ಎಲೆಗಳ ಮೇಲೆ ಕೂರಬಲ್ಲವು, ಕುಪ್ಪಳಿಸಬಲ್ಲವು. ಗಾಜು ಕಪ್ಪೆಗಳ ನೈಸರ್ಗಿಕ ವಾಸಕ್ಷೇತ್ರ ಮಧ್ಯ ಅಮೆರಿಕದ ವೃಷ್ಟಿವನ. ಅಲ್ಲಿನ ನಿತ್ಯ ಮಳೆಯ, ಸದಾ ತೇವದ ಪರಿಸರದಲ್ಲಿ, ವಿಶೇಷವಾಗಿ ನದಿಗಳಂಚಿನ ದಟ್ಟ ಹಸಿರಿನ ಪೊದೆ– ಹೊದರುಗಳಲ್ಲಿ ಅಥವಾ ನದಿಗಳ ಮೇಲೆ ಚಾಚಿದ ವೃಕ್ಷ ಕೊಂಬೆಗಳ ಎಲೆಗಳಲ್ಲಿ ಅವುಗಳ ವಾಸ.



ವಾಸ್ತವ ಏನೆಂದರೆ ಈ ಕಪ್ಪೆಗಳ ಶರೀರವನ್ನಾವರಿಸಿರುವ ಸಂಪೂರ್ಣ ಪಾರಕ. ಹಾಗೆ ಪಾರಕ ಪ್ಲಾಸ್ಟಿಕ್ ಹಾಳೆಯಂತೆ ದೇಹವನ್ನು ಆವರಿಸಿರುವ ಚರ್ಮದಿಂದಾಗಿ ಈ ಕಪ್ಪೆಗಳ ಶರೀರದೊಳಗಿನ ವಿಶೇಷವಾಗಿ ಉದರ ಭಾಗದ ಎಲ್ಲ ಅಂಗಗಳೂ ಹೊರಗಿನಿಂದಲೇ ನೇರ ಗೋಚರ. ಎಲೆಗಳ ಮೇಲೆ ನಿಶ್ಚಲವಾಗಿ ಕುಳಿತ ಗಾಜು ಕಪ್ಪೆ ಎಲೆಗಳೊಡನೆ ಎಷ್ಟು ಬೆರೆತು ಹೋಗಿರುತ್ತದೆಂದರೆ ಕಣ್ಮುಂದೆಯೇ ಇದ್ದರೂ ಸುಲಭವಾಗಿ ಕಾಣುವುದಿಲ್ಲ. ಹಾಗೆ ಶತ್ರುಗಳಿಂದ ರಕ್ಷಣೆಗಾಗಿ ಈ ಗಾಜಿನ ಚರ್ಮ ನಿಸರ್ಗದ್ದೇ ಕೊಡುಗೆ.

ಸದಾ ತೇವ ತುಂಬಿದ ಎಲೆಗಳ ಮೇಲೆ ಹೆಣ್ಣು ಇಡುವ ಮೊಟ್ಟೆಗಳನ್ನು ಫಲವಂತವಾಗಿಸಿ ಗಂಡು ಗಾಜುಗಪ್ಪೆ ಅಲ್ಲೇ ಕಾವಲು ಕೂರುತ್ತದೆ. ಗಾಜಿನ ಕಣಗಳ ಗುಡ್ಡೆಯಂತೆ ತೋರುವ ಆ ಮೊಟ್ಟೆಗಳು 'ಬಾಲದ ಮರಿ'ಗಳಾದೊಡನೆ ಕೆಳಗೆ ಹರಿಯುತ್ತಿರುವ ನದಿ ನೀರಿಗೆ ಜಿಗಿಯುತ್ತವೆ. ಅಲ್ಲೇ ಪ್ರೌಢವಾಗಿ ಗಾಜುಗಪ್ಪೆಗಳಾಗಿ ನದೀ ತೀರದ ವೃಕ್ಷಗಳನ್ನೇರುತ್ತವೆ. ಸಂತಾನ ಕಾಲದಲ್ಲಿ ಈ ಗಾಜಿನ ಗಂಡು ಕಪ್ಪೆಗಳು ಒಟ್ಟಾಗಿ ವಟಗುಟ್ಟುವ 'ಸಂಗೀತ' ವೃಷ್ಟಿವನದ ನಾನಾ ವಿಧದ ತಾರಕ ಗದ್ದಲಗಳ ನಡುವೆಯೂ ಪ್ರತ್ಯೇಕವಾಗಿ ಎದ್ದು ಕೇಳಿಸುತ್ತದೆ.

■ ಎನ್. ವಾಸುದೇವ್